# ಪ್ರೇಮಾ ರಘುನಾಥ್ ಅವರಿಂದ ಪುಸ್ತಕ ವಿಮರ್ಶೆ




**Giving Kids a Fair Chance**

**(ಪುಟ್ಟಾಣಿ ಮಕ್ಕಳಿಗೆ ನ್ಯಾಯವಾದ ಅವಕಾಶ ನೀಡುವುದು)**

ಸಂಪಾದಕರು: ಜೇಮ್ಸ್. ಜೆ. ಹೆಕ್ ಮ್ಯಾನ್

ಪ್ರಸ್ತುತ ಪುಸ್ತಕವು ನೊಬೆಲ್ ಪ್ರಶಸ್ತಿ ಪಡೆದ ಒಬ್ಬ ಅರ್ಥಶಾಸ್ತ್ರಜ್ಞನ ಪ್ರಬಂಧದಿಂದ ಪ್ರಾರಂಭವಾಗುತ್ತದೆ. ಅದರಲ್ಲಿ ಅವರು ಮಗು ಎಲ್ಲಿ ಯಾರಿಗೆ ಹುಟ್ಟುತ್ತದೆ ಎಂಬ ಮುಂಗಾಣದ ಸಂಭವವೇ ಸಾಮಾಜಿಕ ಅಸಮಾನತೆಗೆ ಬಹು ಮುಖ್ಯ ಅಂಶ ಎನ್ನುತ್ತಾರೆ. ಅವರ ಪ್ರಬಂಧದ ತಿರುಳೆಂದರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಥವಾ ಶೈಕ್ಷಣಿಕವಾಗಿ ಅನುಕೂಲರಹಿತರ ಮನೆಗಳಲ್ಲಿ ಹುಟ್ಟಿದ ಮಕ್ಕಳ ಜೀವನದಲ್ಲಿ ಈ ಅನಾನುಕೂಲತೆ ಇನ್ನಷ್ಟು ಹೆಚ್ಚುತ್ತದೆ: ಶಿಶುವಿಹಾರ ಶಿಕ್ಷಣ ಪಡೆಯುವ ಹಂತದ ಹೊತ್ತಿಗೇ ಮಗುವಿನ ಭವಿಷ್ಯದಲ್ಲಾಗಬಹುದಾದ ಅನಾಹುತಗಳಾದ, ಶಾಲೆಯಿಂದ ಹೊರಗುಳಿದು ಬಿಡುವುದು, ಕಿಶೋರಾವಸ್ಥೆಯಲ್ಲಿಯೇ ಗರ್ಭದಾರಣೆ, ಅಪರಾಧಗಳು ಮತ್ತು ಜೀವನದುದ್ದಕ್ಕೂ ಅಲ್ಪ ಕೂಲಿ ಮತ್ತು ನಿರುದ್ಯೋಗ ಸಮಸ್ಯೆಗಳು ಮುಂತಾದ ಸಮಸ್ಯೆಗಳಿಗೆ ರಂಗ ಸಿದ್ಧವಾಗಿರುತ್ತದೆ. ಹ್ಯೆಕ್ ಮ್ಯೆನ್ ಅವರ ಪ್ರಕಾರ ಇವೆ ಅಮೇರಿಕಾದ ಸಮಾಜದ ಹಿನ್ನೆಡೆಗೆ ಕಾರಣವಾಗಿದೆ.

ಹೆಕ್ ಮ್ಯಾನ್ ರವರ ವಾದವೇನೆಂದರೆ, ಅಮೇರಿಕಾದಂತಹ ಸಂಯುಕ್ತ ರಾಷ್ಟ್ರಗಳ ಶೈಕ್ಷಣಿಕ ಯೋಜನೆಗಳು ವಿಷಯಗ್ರಹಣಾ ಶಕ್ತಿಯನ್ನು ವೃದ್ಧಿಸುವುದರ ಕಡೆಗೆ ಗಮನ ಹರಿಸುತ್ತವೆ, ಆದರೆ ಜೀವನದ ಯಶಸ್ಸಿಗೆ ವಿಷಯಗ್ರಹಣಾ ಶಕ್ತಿಯನ್ನೂ ಮೀರಿ ಅನೇಕ ಅಂಶಗಳು ಕಾರಣವಾಗುತ್ತವೆ. ಮಗುವಿಗೆ ಸಾಮರ್ಥ್ಯದ ಜೊತೆಗೆ ಆತ್ಮವಿಶ್ವಾಸ ಮತ್ತು ಧೈರ್ಯ, ವೈಯಕ್ತಿಕ ಮತ್ತು ಔದ್ಯೋಗಿಕ ಜೀವನದಲ್ಲಿ ಅಗತ್ಯವಾಗಿರುವ ಗುಣಗಳನ್ನು ಗಳಿಸಲು ಅನುಕೂಲವಾಗ ಬಹುದಾದ ಅವಕಾಶಗಳು ಅಗತ್ಯವಾಗಿರುತ್ತವೆ. ಡಾ. ಹೆಕ್ ಮ್ಯಾನ್ ರವರು ಹೇಳುವುದೇನೆಂದರೆ, ಈ ಗುಣಗಳನ್ನು, ಅನುಕೂಲಸ್ಥರ ಕುಟುಂಬದಲ್ಲಿ ಅದೃಷ್ಟ ಪಡೆದು ಜನಿಸಿದ ಮಗುವು ತಾನೇ ತಾನಾಗಿ ಮೈಗೂಡಿಸಿಕೊಳ್ಳುತ್ತದೆ ಮತ್ತು ಪ್ರತಿಹಂತದಲ್ಲೂ ಪ್ರದರ್ಶಿಸುತ್ತದೆ. ಆದುದರಿಂದ ಹೆಕ್ ಮ್ಯಾನ್ ರವರು, ಈ ಕೌಶಲ್ಯಗಳನ್ನು ಎಲ್ಲಾ ವರ್ಗದ ಮಕ್ಕಳೂ ಮೈಗೂಡಿಸಿಕೊಳ್ಳಲು ಅವಕಾಶಗಳು ಸಮಪ್ರಮಾಣದಲ್ಲಿ ದೊರೆಯಬೇಕು ಮತ್ತು ಅದಕ್ಕಾಗಿ ಶಿಶು ಶಿಕ್ಷಣದಲ್ಲಿ ಸುಧಾರಣೆ ತರಬೇಕು ಮತ್ತು ಸಾಮಾಜಿಕ ನೀತಿ-ನಿಯಮಗಳು ಬದಲಾಗಬೇಕು ಎನ್ನುತ್ತಾರೆ. ಅನುಕೂಲವಂಚಿತ ಮನೆತನದಿಂದ ಬಂದ ಮಕ್ಕಳ ಪರಿಸರವನ್ನು ಉತ್ತಮಗೊಳಿಸುವ, ಅದೇ ಸಂದರ್ಭದಲ್ಲಿ ಅಮೇರಿಕಾದಂತಹ ದೇಶಗಳ ಸಾಂಸ್ಕೃತಿಕ ವೈವಿಧ್ಯ ಮತ್ತು ಕುಟುಂಬಗಳ ಮೌಲ್ಯ ಗಳನ್ನು ಗಮನದಲ್ಲಿಟ್ಟುಕೊಂಡು, ಶಿಶುಹಾರದ ಶಿಕ್ಷ'ಣದಲ್ಲಿ ನೂತನ ದೃಷ್ಟಿಕೋನ ತರಬೇಕು ಎಂದು ವಾದಿಸುತ್ತಾರೆ.

ಹ್ಯೆಕ್ ಮ್ಯೆನ್ ಅವರು ಮೂಲತಃ ಒಬ್ಬ ಅರ್ಥಶಾಸ್ತ್ರಜ್ಞ, ಹಾಗಾಗಿ ಅವರು ಪರಿಸ್ಥಿತಿಗಳನ್ನು ಇತರ ಅಂಶಗಳ ಜೊತೆಗೆ ಅದರಿಂದ ಅಮೇರಿಕಾಕ್ಕೆ ಎಷ್ಟು ವೆಚ್ಚ ಉಂಟಾಗುತ್ತದೆ ಎಂಬ ಮಸೂರದಿಂದ ನೋಡುತ್ತಾರೆ. ಪುಟ್ಟ ಮಕ್ಕಳ ಶಾಲೆಯಲ್ಲಿ ಶಿಕ್ಷಕ-ಶಿಷ್ಯ ಅನುಪಾತ ಕಡಿಮೆ ಆದದ್ದರಿಂದ ಹಿಡಿದು ವಯಸ್ಕರ ಸಾಕ್ಷರತೆವರೆಗೆ ಎಷ್ಟು ಬೇಗ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೋ ಅಷ್ಟು ಹೆಚ್ಚು ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳು ಉಂಟಾಗುತ್ತವೆ ಎಂದು ಹೇಳುತ್ತಾರೆ.

2008 ರಲ್ಲಿ ಆರ್ಥಿಕ ಕುಸಿತವಾದಾಗ ಶಿಕ್ಷಣಕ್ಕೆ ನೀಡಲಾಗುತ್ತಿದ್ದ ಧನ ಸಹಾಯವನ್ನು ನಿಲ್ಲಿಸಲಾಯಿತು. ಈ ಕುರಿತು ಹೈಕ್ ಮ್ಯೆನ್ ರವರ ವಾದವೇನೆಂದರೆ, ಹಣವನ್ನು ಹೆಚ್ಚು ಹೆಚ್ಚು ಹೂಡಿಕೆಮಾಡಿದರೆ ಭವಿಷ್ಯದ ಸಮಾಜಕ್ಕೆ ಉತ್ತಮ ಫಲಿತಾಂಶ ದೊರಕಿಸುವಂತಹ ಕ್ಷೇತ್ರ ಶಿಕ್ಷಣವೊಂದೇ. ಹೈಕ್ ಮ್ಯೆನ್ ಈ ದೂರದೃಷ್ಟಿ ಹೊಂದಿಲ್ಲದಂತಹ ಯೋಜನೆಗಳನ್ನು ಕೈ ಬಿಡಬೇಕೆಂದು ಕರೆ ನೀಡಿ ಮತ್ತು ಶಿಶುವಿಹಾರ ಶಿಕ್ಷಣದ ಕಾರ್ಯಕ್ರಮಗಳನ್ನು ವಿನ್ಯಾಸಗೊಳಸಲು ಹಾಗೂ ಅವುಗಳ ಮೇಲೆ ಹಣ ತೊಡಗಿಸುವಿಕೆಯನ್ನು ಕುರಿತು ಪ್ರಾಯೋಗಿಕ ಸಲಹೆ ನೀಡುತ್ತಾರೆ.

ಹೈಕ್ ಮ್ಯೆನ್ ರವರ ಮನವೊಲಿಸುವ ಪ್ರಬಂಧದ ತರುವಾಯ ಈ ಪುಸ್ತಕವು ಕೆಲವು ಚರ್ಚೆಗಳನ್ನು ಒಳಗೊಂಡಿದೆ, ಅವುಗಳಲ್ಲಿ ಇತರ ಶಿಕ್ಷಣತಜ್ಞರು ಸಮಕಾಲೀನವಾಗಿ ಕಾಡುತ್ತಿರುವ ಒಂದು ಸಮಸ್ಯೆಯಾದ ಅಸಮಾನತೆ, ಶಾಲೆಗಳ ಅದರ ಪಾತ್ರ ಮತ್ತು ಸಾಮಾಜಿಕ ಅಡೆತಡೆಗಳನ್ನು ಪರೀಕ್ಷಿಸಿ ಅವುಗಳನ್ನು ಅಂತ್ಯಗೊಳಸುವುದು ಹಾಗೂ ಸಾರ್ವಜನಿಕ ಹಣವನ್ನು ತೊಡಗಿಸುವುದು ಇವುಗಳನ್ನು ಕುರಿತು ಮಾತನಾಡುತ್ತಾರೆ. ಈ ಚರ್ಚೆಯಲ್ಲಿ ಮೈಕ್ ರೋಸ್, ಜಿಫ್ರಿ ಕೆನಡಾ, ಚಾರ್ಲ್ಸ್ ಮರ್ರೆ, ಕರೋಲ್ ಡ್ವೆಕ್ ಮತ್ತು ಆನೆಟ್ ಲಾರೋ ಭಾಗವಹಿಸಿದ್ದು ಆನೆಟ್ ಲಾರೋ ಅವರ ಪ್ರಬಂಧ ಈ ಪುಸ್ತಕದಲ್ಲೇ ಅತಿ ಸ್ವಾರಸ್ಯಕರ ಮತ್ತು ಚಿಂತನೆಗಳನ್ನು ಹುಟ್ಟಿಸುವಂತಹ ಅಂಶಗಳನ್ನು ಒಳಗೊಂಡಿರುತ್ತವೆ. ಅವರು ಪ್ರಾಧ್ಯಾಪಕ ಹೈಕ್ ಮ್ಯೆನ್ ರವರ ಆಲೋಚನೆಗೆ ಸಮ್ಮತಿಯನ್ನು ನೀಡುವುದಿಲ್ಲ ಬದಲಾಗಿ ಅತಿಯಾದ ಸೌಕರ್ಯವನ್ನು ನೀಡುವುದರಿಂದ ಯಾವ ಸೌಕರ್ಯವೂ ಇಲ್ಲದೇ ಇರುವಂತಹ ಅನಾಹುತಗಳು ನಡೆಯಬಹುದೆಂಬ ಅಂಶವನ್ನು ಮುಂದಿಟ್ಟಿರುತ್ತಾರೆ. ಜನ್ಮಜಾತ ಪರಿಸರದ ಅನಾನೂಕೂಲತೆಗಳು ಮತ್ತು ಅದರಿಂದಾಗುವ ಅನಾಹುತಗಳ ನಡುವಿನ ಅಂತರವನ್ನು ಭರಿಸುವಲ್ಲಿ ಶಾಲೆಗಳಂತಹ ಸಾಮಾಜಿಕ ಕೇಂದ್ರಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅವರ ಮುಂದುವರಿದ ವಾದವೇನೆಂದರೆ: ಶಿಕ್ಷಣವು ಭವಿಷ್ಯಕ್ಕೊಂದು ರೂಪುರೇಷೆಯನ್ನು ನೀಡಬಹುದು ಅದರೆ, ಅದೇ ಜೀವನದ ಎಲ್ಲವೂ ಅಲ್ಲ.

ಎಡಮ್ ಸ್ವಿಫ್ಟ್ ಮತ್ತು ಹೆರಿ ಬ್ರಿಜ್ಡ್ ಹೌಸ್ ರವರು ಅವರವರ ಪ್ರಬಂಧದಲ್ಲಿ ಶಿಶು ಶಿಕ್ಷಣವು ಮಗುವಿನ ಬಹುತೇಕ ಮಕ್ಕಳ ವರ್ತನೆಗಳ ಪರವಾಗಿರುತ್ತದೆಯೇ ಹೊರತು ಆ ಮಕ್ಕಳ ಗುಂಪಿನಲ್ಲಿ, ಬರುವಂತಹ ವಿವಿಧ ಸಾಂಸ್ಕೃತಿಕ ನೆಲೆಗಟ್ಟಿನ ಮಕ್ಕಳ ಪ್ರತ್ಯೇಕ ಅಂಶಗಳ ಬಗ್ಗೆ ಗಂಭೀರವಾಗಿ ಆಲೋಚಿಸುವುದಿಲ್ಲ. ಆದುದರಿಂದ ಇವುಗಳು ಭವಿಷ್ಯದಲ್ಲಿ ಇನ್ನಷ್ಟು ಅನಾನುಕೂಲತೆಗೆ ಎಡೆಮಾಡಿಕೊಡುತ್ತವೆ ಎಂದು ಒತ್ತಿ ಹೇಳುತ್ತಾರೆ.

ಇನ್ನಿತರ ಲೇಖಕರ ವಾದಗಳು ಈ ಕೆಳಗಿನ ವಿಭಿನ್ನ ಹೊಸ ಹೊಸ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಅವರಲ್ಲಿ ಎಲ್ಲರೂ ಡಾ. ಹೈಕ್ ಮ್ಯೆನ್ ರವರ ಹೇಳಿಕೆಗಳನ್ನು ಒಪ್ಪುವುದಿಲ್ಲ. ಎಲ್ಲರ ನಿಲುವಿನಲ್ಲಿ ವೈವಿಧ್ಯಮಯವಾದ ಮತ್ತು ಸಮತೋಲನವಾದ ಅಂಶಗಳಿದ್ದರೂ ಹೋಲಿಕೆಯಲ್ಲಿ ಹೈಕ್ ಮ್ಯೆನ್ ರವರ ವಾದಗಳು ಸರಳವಾದವುಗಳು. ಅವೆಂದರೆ, ಉತ್ತಮ ಪರಿಸರದಲ್ಲಿ ಹುಟ್ಟಿದ ಮಗುವಿಗೆ ಭವಿಷ್ಯದಲ್ಲಿ ಇನ್ನೂ ಉತ್ತಮ ಅನುಕೂಲಗಳು ದೊರೆಯುತ್ತವೆ ಎಂಬ ವಾದ ಸತ್ಯವಾದ ಸಂಗತಿಯಾದರೂ, ಅನಾನುಕೂಲವಾದ ಪರಿಸರದಲ್ಲಿ ಹುಟ್ಟಿದ ಮಗುವಿಗೆ ಆ ಪರಿಸರವು ಅದರ ಪ್ರಸ್ತುತ ಮತ್ತು ಮುಂದಿನ ಭವಿಷ್ಯದ ಸನ್ನಿವೇಶ'ವನ್ನು ಇನ್ನಷ್ಟು ಹದಗೆಡಿಸುತ್ತವೆ ಎಂಬ ಅಂಶ ನಿಜವಲ್ಲ. ಇಂದಿನ ಸಮಾಜದಲ್ಲಿ ಮಕ್ಕಳು ತಮ್ಮ ಆರಂಭಿಕ ಪರಿಸರವನ್ನು ಮೀರಿ ಮೆಟ್ಟಿನಿಂತು ಬದುಕಿನಲ್ಲಿ ಗೌರವಯುತವಾದ ಸ್ಥಾನ ಪಡೆದಿರುವ ಮತ್ತು ಹಣಕಾಸು ದೃಷ್ಟಿಯಿಂದಲೂ ಮುಂದೆಬಂದಿರುವ ಅನೇಕ ಉದಾಹರಣೆಗಳಿವೆ.

ಪ್ರಸ್ತುತ ಈ ಕಿರಿದಾದ ಪುಸ್ತಕವನ್ನು ಆಸಕ್ತಿದಾಯಕಗೊಳಸುವಲ್ಲಿ, ಡಾ. ಹೈಕ್ ಮ್ಯೆನ್ ರವರ ಪ್ರಬಂಧಕ್ಕಿಂತ, ಇನ್ನಿತರ ಲೇಖಕರ' ಖಂಡನಾತ್ಮಕ ಅಂಶಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ವಿಶೇಷವಾಗಿ, ಅನೇಕ ಅಸಮಾನತೆಯನ್ನು ಹೊಂದಿರುವ ನಮ್ಮಂತಹ ಸಮಾಜದಲ್ಲಿ ಅವುಗಳ ಕುರಿತು ಚಿಂತನೆಗೆ ಎಡೆ ಮಾಡಿಕೊಡುವಲ್ಲಿ ಪ್ರಸ್ತುತ ಈ ಪುಸ್ತಕ ತುಂಬಾ ಅನುಕೂಲಕರವಾದುದ್ದು. ಆದುದರಿಂದ ಈ ಪುಸ್ತಕ ಎಲ್ಲಾ ಗ್ರಂಥಾಲಯಗಳಲ್ಲಿಯೂ ಇರಬೇಕಾದುದು ಅಗತ್ಯವೆಂದು ಶಿಫಾರಸ್ಸು ಮಾಡ'ಲಾಗಿದೆ.